ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು : ಡಾ. ವೈ. ಎ. ನಾರಾಯಣಸ್ವಾಮಿ
ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು
ಚುಕ್ಕೆ ಸಹಿತ ಪ್ರಶ್ನೆ ಸಂಖ್ಯೆ : 1860
ಉತ್ತರಿಸುವ ದಿನಾಂಕ : 24.03.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮಾವು ಅಭಿವೃದ್ಧಿ ಮಂಡಳಿ ಅಸ್ತಿತ್ವದಲ್ಲಿ ಇದೆಯೇ:	ಹೌದು.
ಆ)	ಇದ್ದಲ್ಲಿ, ಇದರ ಕೇಂದ್ರ ಕಛೇರಿ ಎಲ್ಲಿದೆ ಮತ್ತು ಇದರ ವಿವರಗಳನ್ನು ನೀಡುವುದು:	ಕೇಂದ್ರ ಕಛೇರಿ : ಎಫ್ ಬ್ಲಾಕ್, 2ನೇ ಮಹಡಿ, ಕೆ.ಜಿ. ರಸ್ತೆ, ಕಾವೇರಿ ಭವನ, ಬೆಂಗಳೂರು-560009. ಕರ್ನಾಟಕ ರಾಜ್ಯದಲ್ಲಿ ಕಂಪನಿ ಕಾಯ್ದೆ 1956 ರ ಅಡಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.) ಎಂಬ ಹೆಸರಿನಲ್ಲಿ ನೊಂದಣಿ ಮಾಡಿದ್ದು, ದಿನಾಂಕ:19-01-2011 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ.
ಇ)	ಮಾವು ಅಭಿವೃದ್ಧಿ ಮಂಡಳಿಯಿಂದ ಮಾವು ಬೆಳೆಗಾರರಿಗೆ ಆಗುವ ಪ್ರಯೋಜನಗಳೇನು:	**ಮಾವು ಅಭಿವೃದ್ಧಿ ಮಂಡಳಿಯಿಂದ ಮಾವು ಬೆಳೆಗಾರರಿಗೆ ಪ್ರಯೋಜನಕ್ಕಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.** • ಮಾವು ಬೆಳೆಯಲ್ಲಿ ಅನುಸರಿಸಬೇಕಾದ ತಾಂತ್ರಿಕ ಬೇಸಾಯ ಪದ್ಧತಿಗಳು, ಸಸ್ಯ ಸಂರಕ್ಷಣಾ ಕ್ರಮಗಳು ಹಾಗೂ ಇನ್ನಿತರೆ ಪೂರಕ ಚಟುವಟಿಕೆಗಳ ಬಗ್ಗೆ ಮಾವು ಬೆಳೆಗಾರರಿಗೆ ಕಾಲಕಾಲಕ್ಕೆ ಅಗತ್ಯ ತಾಂತ್ರಿಕ ಸಲಹೆ/ಶಿಫಾರಸ್ಸುಗಳನ್ನು ಪಡೆಯಲು ವಿಷಯ ತಜ್ಞರು, ಅಧಿಕಾರಿಗಳು ಮತ್ತು ರೈತ ಪ್ರತಿನಿಧಿಗಳನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಿ ಸಲಹೆ/ ಶಿಫಾರಸ್ಸುಗಳನ್ನು ಮಾಹೆವಾರು ಕರ ಪತ್ರಗಳು, ಭಿತ್ತಿ ಪತ್ರ, ಕೈಪಿಡಿಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ ಹಾಗೂ ತರಬೇತಿ ಮತ್ತು ಪ್ರಾತ್ಯಕ್ಷತೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. • ಕೊಯ್ಲು ಪೂರ್ವ ಮತ್ತು ಕೊಯ್ಲೋತ್ತರ ಚಟುವಟಿಕೆಗಳ ಬಗ್ಗೆ ತಾಂತ್ರಿಕ ತರಬೇತಿ, ಪ್ರಾತ್ಯಕ್ಷತೆ, ಹೊರ ರಾಜ್ಯ ಅಧ್ಯಯನ ಪ್ರವಾಸಗಳ ಮೂಲಕ ರೈತರಿಗೆ ಅರಿವು ಮೂಡಿಸುವುದು. • ಉತ್ತಮ ಗುಣಮಟ್ಟದ ಮಾವು ಉತ್ಪಾದನೆಗೆ ಬೇಕಾದ ಅವಶ್ಯಕ ಕೊಯ್ಲು ಪೂರ್ವ ಮತ್ತು ಕೊಯ್ಲೋತ್ತರ ಪರಿಕರಗಳಾದ ಮ್ಯಾಂಗೋ ಸ್ಪೆಷಲ್, KNO3, ಸೀಲರ್ ಕಮ್ ಸೀಲರ್, ಫ್ರೂಟ್ ಬ್ಯಾಗ್ಸ್, ಫೆರಮೋನ್ ಟ್ರ್ಯಾಪ್ಸ್, ಪ್ಲಾಸ್ಟಿಕ್ ಕ್ರೇಟ್ಸ್, ಕಾರ್ಟೂನ್ ಬಾಕ್ಸ್, ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ, ಇಥಿಲೀನ್ ಕ್ಯಾನ್ಸ್ ಹಾಗೂ ಕಟಾವು ಸಲಕರಣೆ ಬಳಕೆಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. • ನೇರ ಮಾರುಕಟ್ಟೆ ಉತ್ತೇಜನಕ್ಕಾಗಿ ಮಾವು ಮೇಳ, ಮ್ಯಾಂಗೋ ಪಿಕ್ಕಿಂಗ್ ಟೂರಿಸಂ, ಜಿಲ್ಲಾ ಮಟ್ಟದ ಮಾವು ಮೇಳ, ಆನ್ ಲೈನ್ ಮಾರುಕಟ್ಟೆಗಾಗಿ B2C ತಂತ್ರಾಂಶ (https://www.karsirimangoes.karnataka.gov.in),

		ರಫ್ತುದಾರರು/ಖರೀದಿದಾರರು ಮತ್ತು ಬೆಳೆಗಾರರ ಮಾರುಕಟ್ಟೆ ಸಂಪರ್ಕ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗಿದೆ. • ಮಾವು ರಫ್ತು ಕೌಶಲ್ಯ ಕುರಿತು ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ (VTPC) ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. • ಉತ್ತಮ ಗುಣಮಟ್ಟದ ಉತ್ಪಾದನೆ ಉತ್ತೇಜಿಸಲು ಪೂರಕವಾಗಿ ಜಾಗತಿಕ ಉತ್ತಮ ಕೃಷಿ ಪದ್ಧತಿ (Global GAP) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. • ಮಾವು ಬೆಳೆಗಾರರ ಅನುಕೂಲಕ್ಕಾಗಿ ಮಾವು ಅಭಿವೃದ್ಧಿ ಕೇಂದ್ರ, ಮಾಡಿಕೆರೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮಾವಿನ ಹಣ್ಣಿನ ವಿಂಗಡಣೆ, ಗ್ರೇಡಿಂಗ್, ಪ್ಯಾಕಿಂಗ್, ಬಿಸಿ ನೀರಿನ ಸಂಸ್ಕರಣೆ ಮತ್ತು ಎಥಿಲೀನ್ ಮೂಲಕ ಹಣ್ಣು ಮಾಗಿಸುವ ಘಟಕದ ಪ್ರಾತ್ಯಕ್ಷತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಮಾವಿನ ಹಣ್ಣಿನ ಸಂಸ್ಕರಣಾ ಸೌಲಭ್ಯದ ಪ್ರಾತ್ಯಕ್ಷತೆ ಘಟಕವನ್ನು ಸ್ಥಾಪಿಸಲಾಗಿದ್ದು, ಮಹಿಳಾ ಸ್ವಸಹಾಯ ಸಂಘ, ರೈತ ಸಂಘಗಳು ಮತ್ತು ಉದ್ಯಮಿಗಳಿಗೆ ತರಬೇತಿಗಳನ್ನು ಸಹ ನೀಡಲಾಗುತ್ತಿದೆ.
ಈ)	ಇದುವರೆಗೆ ಈ ಮಂಡಳಿಯಿಂದ ಮಾವು ಬೆಳೆಗಾರರಿಗೋಸ್ಕರ ಖರ್ಚು ಮಾಡಿರುವ ಹಣ ಎಷ್ಟು:	2010-11 ನೇ ಸಾಲಿನಿಂದ 2019-20 ರ ಫೆಬ್ರವರಿ ಮಾಹೆಯ ಅಂತ್ಯದವರೆಗೆ ರೂ. 3052.29 ಲಕ್ಷಗಳನ್ನು ಮಾವು ಬೆಳೆಗಾರರ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ವೆಚ್ಚ ಭರಿಸಲಾಗಿದೆ.
ಉ)	ಕೋಲಾರ ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಮಾವು ಬೆಳೆಯುವ ಶ್ರೀನಿವಾಸಪುರ ತಾಲ್ಲೂಕಿನ ಹೊಗಳಗೆರೆ ತೋಟಗಾರಿಕಾ ಫಾರಂಗೆ ಮಾವು ಅಭಿವೃದ್ಧಿ ಮಂಡಳಿಯ ಕೇಂದ್ರ ಕಛೇರಿಯನ್ನು ಸ್ಥಳಾಂತರಿಸಲಾಗುವುದೇ?	ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

HORTI 181 HGM 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ರೇಷ್ಮೆ ಸಚಿವರು.